## ನೀತಿ ಬೋಧಕ

'ಪಬ್ಲಿಕ್ ಮೂವೀಸ್'ನಲ್ಲಿ ಬಿ.ಆರ್. ಪಂತುಲು ಅವರ 'ದುಡ್ಡೇ ದೊಡ್ಡಪ್ಪ' ಚಿತ್ರ ಪ್ರಸಾರ ಮಾಡಿದರು. ಎಂತಹ ನೀತಿ ಬೋಧಕ ಚಿತ್ರ. ಮಕ್ಕಳಿಗೆ ಎಂತಹ ಸಂಸ್ಕಾರ ಕೊಡಬೇಕು, ಗ್ರಾಮದ ಸ್ವಚ್ಛತೆ, ಕುಡಿತ ಬಿಡುವ ಬಗ್ಗೆ, ಗ್ರಾಮೀಣ ಅಥವಾ ಗೃಹ ಕೈಗಾರಿಕೆ ಬಗ್ಗೆ ಅರಿವು ಮೂಡಿಸಿದ್ದಾರೆ. ಈಗ ಹೆಚ್ಚಿನ ಚಿತ್ರಗಳಲ್ಲಿ ಯಾವ ರೀತಿಯ ಸಂದೇಶವೂ ಇರುವುದಿಲ್ಲ. ಹೊಡಿ, ಬಡಿ, ಲಾಂಗ್, ಮಚ್ಚು, ಸಂಸ್ಕೃತಿ ತುಂಬಿ ತುಳುಕಾಡುತ್ತಿವೆ.

—ಎ.ಪಿ. ರಂಗನಾಥ್, ಮೈಸೂರು

## ನಗಿಸಿದ ಕಾಮಿಡಿ

ಮೇ 5ರಂದು ಪ್ರಸಾರವಾದ ಕಾಮಿಡಿ ಕಿಲಾಡಿಗಳು ಸಂಚಿಕೆಯಲ್ಲಿ ಸೀರುಂಡೆ ರಘುರವರು ಉಪೇಂದ್ರ ಮತ್ತು ಭಿಕ್ಷುಕನಾಗಿ ಚೆನ್ನಾಗಿ ಅಭಿನಯಿಸಿದರು. ಈತನ ತಂದೆ– ತಾಯಿಯಾಗಿ ಮನು ಮಂದಾರಳ ಪಾತ್ರ ಸೊಗಸಾಗಿತ್ತು. ಇನ್ನುಳಿದಂತೆ ಭಿಕ್ಷುಕರಾಗಿ ಸೂರ್ಯ, ಶೌಕತ್ ಅಲಿ, ಶಿವನಂದ ತಂಡರಗಿ ಪಾತ್ರ ಚೆನ್ನಾಗಿತ್ತು.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಬೆಳ್ಳಿ ತೆರೆ

'ಸರಳ ಜೀವನ' ಟಿ.ವಿ. ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಬೆಳ್ಳಿ ತೆರೆ' ಕಾರ್ಯಕ್ರಮದಲ್ಲಿ ಕೆಲವು ದಶಕಗಳ ಹಿಂದೆ ಸಿನಿಮಾದ ಸಾಮ್ರಾಜ್ಞೆಯಾಗಿ ಮೆರೆದಿದ್ದ ಹಾಗೂ ಈಗ ವೃದ್ಧಾಪ್ಯದಲ್ಲಿ ಜನರ ಮಧ್ಯೆ ಒಂದು ರೀತಿ ಅಜ್ಞಾತ ವಾಸದಲ್ಲಿರುವ ಹಲವು ಸುಂದರಿಯರನ್ನು ಮತ್ತೆ ತೆರೆಯ ಮೇಲೆ ತೋರಿಸುವ ಒಂದು ಶ್ಲಾಘನೀಯ ಪ್ರಯತ್ನ ನಡೆಯುತ್ತಿದೆ. ಎಲ್ಲರೂ ನೋಡುವಂತಹ ಕಾರ್ಯಕ್ರಮ.

—ಶ್ರೀನಿವಾಸನ್, ಮೈಸೂರು

ವಾರದ ಪತ್ರ

## ದಾರಿ ತಪ್ಪಿಸುವ ಧಾರಾವಾಹಿ

ಝೀ ಕನ್ನಡದ 'ಮಹಾದೇವಿ'ಯಲ್ಲಿ ಬಾಲನಾಯಕಿ( ಹಿರಣ್ಮಯಿ )ಗೆ ಪ್ರತಿಯಾಗಿ ಬಾಲ ಖಳನಾಯಕಿಯೊರ್ವಳನ್ನು ಸೃಷ್ಟಿಸಿದ್ದಾರೆ. ಮೇ 10 ರಂದು ಬಿತ್ತರವಾದ ಧಾರಾವಾಹಿಯ ಕಂತಿನಲ್ಲಿ ಸದ್ರಿ ಬಾಲಖಳನಾಯಕಿ ತೀರ್ಥದಲ್ಲಿ ಜ್ಞಾನ ತಪ್ಪಿಸುವ ಮದ್ದು ಬೆರೆಸಿ ಹಿರಣ್ಮಯಿಗೆ ಕುಡಿಸಿ ತನ್ನ ಸಹಪಾಠಿಗಳಿಬ್ಬರೊಂದಿಗೆ ಅವಳನ್ನು ಗೋಣಿಚೀಲದಲ್ಲಿ ಬಂಧಿಸಿ ಮಣ್ಣಿನ ಹೊಂಡವೊಂದರಲ್ಲಿ ತಳ್ಳಿ ಹೋದ ದೃಶ್ಯವನ್ನು ಪ್ರಸಾರ ಮಾಡಲಾಗಿದೆ. ಬಾಲನಾಯಕಿ ಶಾಲಾ ಪರೀಕ್ಷೆಗೆ ಹಾಜರಾಗುವುದನ್ನು ತಡೆಗಟ್ಟುವುದೇ ಅಕೆಯ ಕುಕೃತ್ಯದ ಹಿಂದಿರುವ ದುರುದ್ದೇಶ!

ಇಂತಹ ಧಾರಾವಾಹಿಗಳನ್ನು ವೀಕ್ಷಿಸುವ ಶಾಲಾ ಮಕ್ಕಳಿಗೆ ದಾರಿತಪ್ಪಲು ಈ ದೃಶ್ಯಗಳು ಪ್ರೇರಕವಾಗುತ್ತವೆ. ಬದಲಾಗಿ ಭವಿಷ್ಯತ್ತು ನಿರ್ಮಿಸಿಕೊಳ್ಳಲು ಪೂರಕವೆನಿಸುವ ಆದರ್ಶ ಕಥೆ/ ದೃಶ್ಯ ಪ್ರದರ್ಶನಗಳಿಗೆ ಒತ್ತು ನೀಡುವುದೊಳಿತು!

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ.

## ಮೂರ್ಖತನದ ಪರಮಾವಧಿ?

'ರಾಧ ರಮಣ'ದಲ್ಲಿ ಆಸ್ಪತ್ರೆಯಲ್ಲಿ ತಲೆಗೆ ಏಟು ಬಿದ್ದು ವಿಷಮ ಸ್ಥಿತಿಯಲ್ಲಿದ್ದ ಅವನಿಗೆ ಶಸ್ತ್ರ ಚಿಕಿತ್ಸೆ ನಡೆದಿರುತ್ತದೆ. ಆ ವೇಳೆಯಲ್ಲಿ ರೋಗಿಗೆ ಮುಖಕ್ಕೆ ಮಾಸ್ಕ್ ಅಳವಡಿಸಿ ಆಮ್ಲಜನಕದ ವ್ಯವಸ್ಥೆ ಮಾಡಿರುತ್ತಾರೆ. ಅಂತಹ ಸ್ಥಿತಿಯಲ್ಲಿ ರುದ್ರ ಅವಳನ್ನು ಅಪಹರಣ ಮಾಡುತ್ತಾನೆ. ಅದು ಸಿ.ಸಿ. ಟಿ.ವಿ.ಯಲ್ಲಿ ಕಾಣುತ್ತಿರುತ್ತದೆ. ತಕ್ಷಣ ಅವನನ್ನು ಹಿಡಿಯುವುದನ್ನು ಬಿಟ್ಟು ಡಾಕ್ಟರ್ ಸಹಿತ ಎಲ್ಲರೂ ಅದನ್ನು ನೋಡುತ್ತಾ ಕುಳಿತಿರುತ್ತಾರೆ. ಅಲ್ಲದೆ ಅವನು ಆಸ್ಪತ್ರೆಯ ಗೇಟ್‌ನಲ್ಲಿ ಆ್ಯಂಬುಲೆನ್ಸ್ ಮೂಲಕ ಹೋಗುವುದಕ್ಕೆ ಬಿಟ್ಟು, ಆಚೆ ಬಂದು ಎಲ್ಲರೂ ನೋಡುತ್ತಾ ನಿಂತಿರುತ್ತಾರೆ. ಅನಂತರ ರಮಣ ಎಂಬ ನಾಯಕನಟ ಆ್ಯಂಬುಲೆನ್ಸ್‌ಗಿಂತ ಜೋರಾಗಿ ಓಡಿ, ಹಿಂಬದಿಯಲ್ಲಿ ಏಣಿ ಏರಿ ನಿಂತು ರುದ್ರನಿಗೆ ವಾಹನ ನಿಲ್ಲಿಸಲು ಹೇಳುತ್ತಾನೆ. ಅಲ್ಲದೆ ಕೈ ಜಾರಿ ಬಿದ್ದಾಗ ಸ್ವಲ್ಪವೂ ಗಾಯಗೊಳ್ಳದೆ ಪೊಲೀಸ್ ಸಹಾಯದಿಂದ ರುದ್ರನನ್ನು ಹಿಂಬಾಲಿಸುತ್ತಾನೆ. ಇದು ಅಸಹಜ ಎನಿಸುವುದಿಲ್ಲವೇ?

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಮಕ್ಕಳ ಮೇಲೆ ಪರಿಣಾಮ

ಝೀ ಟಿವಿ ಯಲ್ಲಿ ಪ್ರಕಟವಾಗುತ್ತಿರುವ ಮಹಾದೇವಿ ಧಾರಾವಾಹಿಯಲ್ಲಿ ಮಕ್ಕಳ ಮೇಲೆ ಪ್ರಭಾವ ಬೀರುವಂತಹ ದುಷ್ಕೃತ್ಯಗಳನ್ನು ತೋರಿಸುತ್ತಿದ್ದಾರೆ. ಹೆಣ್ಣು ಮಕ್ಕಳನ್ನು ಬೆಂಕಿ ಮೇಲೆ ನಡೆಸುವುದು, ಜುಟ್ಟು ಕತ್ತರಿಸುವುದು, ಮೂಟೆಯಲ್ಲಿ ಕಟ್ಟಿ ಬಾವಿಗೆ ಬಿಸಾಡುವುದು ಇತ್ಯಾದಿಗಳನ್ನು ತೋರಿಸುತ್ತಿರುವುದು ಮಕ್ಕಳ ಮೇಲೆ ಪರಿಣಾಮ ಬೀರುವುದಿಲ್ಲವೇ? ನಿರ್ಮಾಪಕರು ದಯಮಾಡಿ ಗಮನಹರಿಸಿ.

— ಅಂಚೆ ಸುಬ್ರಮಣ್ಯ, ಕೊಪ್ಪ

## ಮಣಿಯನ್ನು ಹೊರಹಾಕುವುದೇ ಕಥೆ!

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುವ ಕಿನ್ನರಿ ಧಾರಾವಾಹಿ ನಾಯಕಿಯನ್ನು ವೈಭವೀಕರಿಸುವುದರಲ್ಲೇ ಸಾಗಿದೆ. ಎಷ್ಟು ಸಲ ನಾಯಕಿಯನ್ನು ನಕುಲನ ಮನೆಯವರು ಹೊರಹಾಕಿದರೋ ಲೆಕ್ಕವೇ ಇಲ್ಲ. ಪ್ರತಿ ಸಲ ಪಶ್ಚಾತ್ತಾಪ ಪಟ್ಟು ಮಣಿಯನ್ನು ಮನೆಗೆ ಹುಡುಕಿ ಕರೆತಂದು, ಮನೆಯವರೆಲ್ಲ ವಿಶ್ವಾಸ ತೋರಿಸುತ್ತಾರೆ. ಮತ್ತೆ ಅದನ್ನೆಲ್ಲ ಮರೆತು ತಪ್ಪಿತಸ್ಥಳೆಂದು ತೀರ್ಮಾನಿಸಿ ಹೊರಹಾಕುತ್ತಾರೆ. ಈಗ ಅದನ್ನು ನೋಡಲು ಬೇಸರವಾಗುತ್ತದೆ.

— ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು

## ಕಥೆ ಇಲ್ಲದ ಧಾರಾವಾಹಿಗಳು

ಅಗ್ನಿಸಾಕ್ಷಿಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ನಾಲ್ಕಾರು ಪಾತ್ರಧಾರಿಗಳು ಗಿಳಿಪಾಠದಂತೆ ಒಪ್ಪಿಸುವ ಸಂಭಾಷಣೆ ಕೇಳಿ ಕೇಳಿ ಸಾಕಾಗಿ ಹೋಗಿದೆ. ರೋಮಾನ್ಸ್ ಸನ್ನಿವೇಶಕ್ಕೆ ಕಡಿವಾಣ ಹಾಕದೆ ಮತ್ತೆ ಕಳೆದ ವಾರ ಪ್ರಸಾರ ಮಾಡಲಾಯಿತು. ಕುಲವಧು, ಪುಟ್ಟಗೌರಿ ಮದುವೆ ಮುಂತಾದ ಧಾರಾವಾಹಿಗಳ ನಿರ್ದೇಶಕರು ಮನಬಂದಂತೆ ಹೊಸ ತಿರುವು ಸೃಷ್ಟಿಸಿ ಕಂತು ವಿಸ್ತರಿಸುತ್ತಾ ಸಾಗಿದ್ದಾರೆ. ಸ್ವಾಮಿ, ನಿರ್ದೇಶಕರೇ, ನೈಜತೆ ಇಲ್ಲದ ಬೋರ್ ಹೊಡೆಸುತ್ತಿರುವ ಧಾರಾವಾಹಿಗಳಿಗೆ ಅಂತ್ಯ ಕಾಣಿಸಿ, ಹೊಸ ಧಾರಾವಾಹಿಗಳಿಗೆ ಈಗಲಾದರೂ ಅವಕಾಶ ಮಾಡಿಕೊಡಿ.

—ಡಾ. ಗಿರಿರಾಜ ಕುಲಕರ್ಣಿ, ಬೆಂಗಳೂರು,
ದಾ.ಬೀ.ಪ್ರಾಣೇಶರಾವ್, ಬೆಂಗಳೂರು

## ಅವಾಸ್ತವಿಕ ಧಾರಾವಾಹಿ

ರಾತ್ರಿ 7.30 ಗಂಟೆಗೆ 'ಝೀ' ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಯಾರೆ ನೀ ಮೋಹಿನಿ' ಧಾರಾವಾಹಿಯು ಅವಾಸ್ತವಿಕವಾಗಿದ್ದು ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುವಂತಿದೆ. ಪಾತ್ರಧಾರಿಗಳು ಕಥೆಗೆ ನ್ಯಾಯ ಒದಗಿಸಿದ್ದರೂ ಕತೆಯೇ ಸರಿಯಿಲ್ಲ. ಮುತ್ತುವಿನ ಪತ್ನಿ ಸತ್ತು ಮೋಹಿನಿಯಾಗಿ ಆ ಕುಟುಂಬಕ್ಕೆ ಕಾಟ ಕೊಡುವುದು ವೀಕ್ಷಕರಿಗೆ ಮನರಂಜನೆ ಒದಗಿಸುವಂತಿದ್ದರೂ ಮನೆ ಮಂದಿಯೆಲ್ಲರೂ ಮಕ್ಕಳಾದಿಯಾಗಿ ನೋಡುವಾಗ ಮಕ್ಕಳ ಮನಸ್ಸಿನ ಮೇಲೆ ಮೋಹಿನಿಯ ಛಾಯೆ ಭಯದ ಅನುಭವವಾಗುವಂತಿದೆ. ಮುತ್ತು, ಬೆಳ್ಳಿ, ಮಾಯ ಪಾತ್ರಗಳು ಮನಸ್ಸಿನಲ್ಲಿ ನಿಲ್ಲುವಂತಿವೆ.

—ವಿ. ಹೇಮಂತಕುಮಾರ, ಬೆಂಗಳೂರು